ಕರ್ನಾಟಕ ಸರ್ಕಾರ

# ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

**ಉಪ ನಿರ್ದೇಶಕರ ಕಛೇರಿ, ಸ್ಟೇಡಿಯಂ ಹತ್ತಿರ, ಜಿಲ್ಲಾ ಬಾಲಭವನ ಆವರಣ, ಚಿತ್ರದುರ್ಗ**

**Telephone No. 08194 235259,** **email : ddwcd.chitradurga@yahoo.com**

ಸಂಖ್ಯೆ:ಉನಿಚಿ/ಐಸಿಡಿ/ಅಂಕಾ/ಅಂಸ/ಆನ್‌ಲೈನ್/ನೇಮಕಾತಿ/18–19 ದಿನಾಂಕ:27–09–2018

## :: ಅಧಿಸೂಚನೆ ::

ಸರ್ಕಾರದಆದೇಶ ಸಂಖ್ಯೆ:ಮಮಇ/303/ಐಸಿಡಿ/2017, ದಿನಾಂಕ:23/09/2017 ರಲ್ಲಿ ತಿಳಿಸಿರುವ ಮಾರ್ಗಸೂಚಿಯಂತೆ ಹಾಗೂ ಮಾನ್ಯಅಧ್ಯಕ್ಷರು, ಅಂಗನವಾಡಿಕಾರ್ಯಕರ್ತೆ ಮತ್ತು ಸಹಾಯಕಿಯರಆಯ್ಕೆ ಸಮಿತಿ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ಚಿತ್ರದುರ್ಗಜಿಲ್ಲೆರವರಅನುಮೋದನೆಯಂತೆಚಿತ್ರದುರ್ಗಜಿಲ್ಲಾ ವ್ಯಾಪ್ತಿಯ 07 ಶಿಶು ಅಭಿವೃದ್ಧಿಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇರುವ 18 ಅಂಗನವಾಡಿಕಾರ್ಯಕರ್ತೆ ಹಾಗೂ 87ಅಂಗನವಾಡಿ ಸಹಾಯಕಿಯರಗೌರವ ಹುದ್ದೆಗಳನ್ನು ಭರ್ತಿ ಮಾಡಲುಆನ್–ಲೈನ್ ಮೂಲಕ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. **ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ 01–10–2018ಆಗಿದ್ದು, ಕೊನೆಯ ದಿನಾಂಕ: 31–10–2018ರಂದು ಸಂಜೆ : 5.30 ರವರೆಗೆ.**

**ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ :www.anganwadirecruit.kar.nic.in**

## ಸೂಚನೆಗಳು :–

1) ಅಂಗನವಾಡಿಕಾರ್ಯಕರ್ತೆ ಹಾಗೂ ಸಹಾಯಕಿಯರ ಹುದ್ದೆಗಳನ್ನು ಆನ್–ಲೈನ್(Online) ನಲ್ಲಿ ಸಲ್ಲಿಸಬೇಕಾಗಿರುತ್ತದೆ.

2) ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮೊದಲುಇದರೊಂದಿಗೆ ಲಗತ್ತಿಸಿರುವ ನೇಮಕಾತಿ ಮಾರ್ಗಸೂಚಿ / ನಿಬಂಧನೆಗಳನ್ನು ಓದಿಕೊಂಡು ನಂತರಅಗತ್ಯ ದಾಖಲೆಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು.

3) ಎಲ್ಲಾಅಗತ್ಯ ದಾಖಲಾತಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕಾಗಿರುತ್ತದೆ. ಅಂಚೆ ಅಥವಾಕೊರಿಯರ್ ಮೂಲಕ ಸಲ್ಲಿಸುವ ದಾಖಲಾತಿಗಳನ್ನು ಪರಿಗಣಿಸಲಾಗುವುದಿಲ್ಲ.

## ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು :–

1) ಅರ್ಜಿ ನಿಗದಿತ ನಮೂನೆಯಲ್ಲಿ (ಆನ್‌ಲೈನ್)

2) ಜನನ ಪ್ರಮಾಣ ಪತ್ರ / ಜನ್ಮದಿನಾಂಕವಿರುವ ಎಸ್.ಎಸ್.ಎಲ್.ಸಿ. ಅಂಕಪಟ್ಟಿ

3) ವಿದ್ಯಾರ್ಹತೆ ಬಗ್ಗೆ ಪ್ರಮಾಣ ಪತ್ರ (ಕಾರ್ಯಕರ್ತೆ ಹುದ್ದೆಗೆ ಎಸ್.ಎಸ್.ಎಲ್.ಸಿ.ಗಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿರುವವರು ಎಸ್.ಎಸ್.ಎಲ್.ಸಿ. ತೇರ್ಗಡೆ ಹೊಂದಿಚ್ಚ ಅಂಕಪಟ್ಟಿಯನ್ನು ಮಾತ್ರ ಲಗತ್ತಿಸುವುದು)

4) ವಿದ್ಯಾರ್ಹತೆ ಬಗ್ಗೆ ಪ್ರಮಾಣ ಪತ್ರ (ಸಹಾಯಕಿ ಹುದ್ದೆಗೆ ಕನಿಷ್ಠ 4ನೇ ತರಗತಿಉತ್ತೀರ್ಣಗರಿಷ್ಠ 9ನೇ ತರಗತಿಉತ್ತೀರ್ಣಅಂಕಪಟ್ಟಿ ಲಗತ್ತಿಸುವುದು)

5) ತಹಶೀಲ್ದಾರರು / ಉಪ ತಹಶೀಲ್ದಾರರಿಂದ ಪಡೆದ 01 ವರ್ಷದೊಳಗಿನ ವಾಸಸ್ಥಳ ದೃಢೀಕರಣ ಪತ್ರ

6) ಮೀಸಲಾತಿ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರ ಲಗತ್ತಿಸುವುದು.

7) ವಿಧವೆಯಾದಲ್ಲಿ ಪತಿಯ ಮರಣ ಪ್ರಮಾಣ ಪತ್ರ (ವಿಧವಾ ವೇತನದದೃಢೀಕರಣವನ್ನು ಪರಿಗಣಿಸುವುದಿಲ್ಲ)

8) ಆತ್ಮಹತ್ಯೆ ಮಾಡಿಕೊಂಡಿರುವರೈತನ ಪತ್ನಿಯೆಂದು ಉಪ ವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ ಹಾಗೂ ಮರಣ ಪ್ರಮಾಣ ಪತ್ರ ಲಗತ್ತಿಸುವುದು.

9) ಅಂಗವಿಕಲತೆ ಪ್ರಮಾಣ ಪತ್ರಕಾರ್ಯಕರ್ತೆ ಹುದ್ದೆಗೆ ಮಾತ್ರ (ದೈಹಿಕಅಂಗವಿಕಲತೆ ಶೇ.60 ಮೀರದಂತೆಇರುವವರು ಮಾತ್ರ)

10) ವಿಚ್ಛೇದನ ಪ್ರಮಾಣ ಪತ್ರ (ನ್ಯಾಯಾಲಯದಿಂದ ಪಡೆದಿರಬೇಕು)

11) ಕರ್ನಾಟಕರಾಜ್ಯ ಮಹಿಳಾ ಅಭಿವೃದ್ಧಿ ನಿಗಮದವತಿಯಿಂದ ನಡೆಸಲ್ಪಟ್ಟ ಮಾಜಿ ದೇವದಾಸಿಯರ ಸಮೀಕ್ಷೆಯ ಪಟ್ಟಿಯಲ್ಲಿರುವ ಮಾಜಿ ದೇವದಾಸಿಯರ ಮಕ್ಕಳು ಎಂಬುದರ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪ್ರಮಾಣ ಪತ್ರ.

12) ಪರಿತ್ಯಕ್ತೆಎಂಬುದರ ಬಗ್ಗೆ ಗ್ರಾಮ ಪಂಚಾಯತ್‌ನಿಂದ ಪಡೆದ ಪ್ರಮಾಣ ಪತ್ರ

13) ಇಲಾಖೆಯ ಸುಧಾರಣಾ ಸಂಸ್ಥೆ / ರಾಜ್ಯ ಮಹಿಳಾ ನಿಲಯಗಳ ನಿವಾಸಿ ಎಂಬ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಇಲಾಖೆಯ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ

14) ಯೋಜನಾ ನಿರಾಶ್ರಿತರೆಂಬ ಬಗ್ಗೆ ತಹಶೀಲ್ದಾರ್‌ರವರಿಂದ ಪಡೆದ ಪ್ರಮಾಣ ಪತ್ರ.

15) ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿ ಆಗಿದ್ದುಕಾರ್ಯಕರ್ತೆ / ಸಹಾಯಕಿ ಹುದ್ದೆಗೆಆಯ್ಕೆಯಾದಲ್ಲಿ ಸದಸ್ಯತ್ವಕ್ಕೆರಾಜೀನಾಮೆ ನೀಡಬೇಕಾಗಿರುತ್ತದೆ. ಈ ಬಗ್ಗೆ ಮುಚ್ಚಳಿಕೆ ಸಲ್ಲಿಸುವುದು.

16)ಆನ್‌ಲೈನ್‌ಅರ್ಜಿಯೊಂದಿಗೆಯಾವುದೇಅಗತ್ಯದಾಖಲೆ ಸಲ್ಲಿಸದೇಇದ್ದಲ್ಲಿಅಂತಹಅರ್ಜಿಯನ್ನುತಿರಸ್ಕರಿಸಲಾಗುವುದು.

17) ಅಂಗನವಾಡಿಕಾರ್ಯಕರ್ತೆ / ಸಹಾಯಕಿಯರ ಹುದ್ದೆಯು ಸಂಪೂರ್ಣವಾಗಿಗೌರವ ಸೇವೆಯಾಗಿದ್ದು, ಖಾಯಂ ಹುದ್ದೆಯಾಗಿರುವುದಿಲ್ಲ.

18) ಆಯ್ಕೆ ಪ್ರಕ್ರಿಯೆಯಲ್ಲಿಯಾವುದೇ ಸಮಸ್ಯೆ ಉದ್ಭವಿಸಿದಲ್ಲಿ ಆಯ್ಕೆ ಸಮಿತಿಯ ನಿರ್ಧಾರವೇಅಂತಿಮವಾಗಿರುತ್ತದೆ.

ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಚಿತ್ರದುರ್ಗ

# CALENDER OF EVENTS

ಅಂಗನವಾಡಿಕಾರ್ಯಕರ್ತೆ / ಸಹಾಯಕಿಯರ ನೇಮಕಾತಿ ಪ್ರಕ್ರಿಯೆಯನ್ನುಆನ್‌ಲೈನ್ ಮೂಲಕ ಅರ್ಜಿಆಹ್ವಾನಿಸಲು ಈ ಕೆಳಕಂಡಂತೆ ಕ್ರಮ ವಹಿಸಲಾಗಿದೆ.

| WEBSITE : | www.anganwadirecruit.kar.nic.in |
|---|---|

| ದಿನಾಂಕ | ದಿನಗಳು | ವಿವರ |
|---|---|---|
| 01–10–2018 | | ಆನ್‌ಲೈನ್‌ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ ಬೆಳಗ್ಗೆ : 10.00 ರಿಂದ |
| 31–10–2018 | 31 ದಿನಗಳು | ಆನ್‌ಲೈನ್‌ಅರ್ಜಿ ಸಲ್ಲಿಸಲುಕೊನೆಯ ದಿನಾಂಕ ಸಂಜೆ : 5.30 ರವರೆಗೆ |
| 05–11–2018 | 05 ದಿನಗಳು | ಆಯ್ಕೆ ಸಮಿತಿ ಸದಸ್ಯರು ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಂದ ಸ್ವೀಕರಿಸಲಾದ ಅರ್ಜಿಗಳನ್ನು ಎನ್.ಐ.ಸಿ.ಯಲ್ಲಿ ಪರಿಶೀಲನೆ. |
| 09–11–2018 | 05 ದಿನಗಳು | ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನುಆಯ್ಕೆ ಸಮಿತಿಯಿಂದ ಅನುಮೋದನೆ ಪಡೆಯುವುದು. |
| 16–11–2018 | 07 ದಿನಗಳು | ಅಭ್ಯರ್ಥಿಗಳಿಂದ ಆಕ್ಷೇಪಣೆ ಸಲ್ಲಿಸುವಿಕೆಗೆ ಕಾಲಾವಕಾಶ |
| 19–11–2018 | 03 ದಿನಗಳು | ಆಕ್ಷೇಪಣೆ ಬಂದ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ |
| 24–11–2018 | 05 ದಿನಗಳು | ಪರಿಶೀಲನೆ ನಂತರ ಆಯ್ಕೆ ಸಮಿತಿಯ ಸಭೆ ನಡೆಸಿ ಅಂತಿಮ ಪಟ್ಟಿಗೆ ಅನುಮೋದನೆ ಪಡೆಯುವುದು. |

ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಚಿತ್ರದುರ್ಗ

ಹೆಚ್ಚಿನ ಮಾಹಿತಿಗಾಗಿಚಿತ್ರದುರ್ಗಜಿಲ್ಲೆಯ ಶಿಶು ಅಭಿವೃದ್ಧಿಯೋಜನಾಕಛೇರಿದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಲುಕೋರಿದೆ.

| ಕ್ರ. ಸಂ. | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹೆಸರು | ದೂರವಾಣಿ ಸಂಖ್ಯೆ |
|---|---|---|
| 1 | ಶಿಶು ಅಭಿವೃದ್ಧಿಯೊಜನೆ, ಭರಮಸಾಗರ | 08194–231626 |
| 2 | ಶಿಶು ಅಭಿವೃದ್ಧಿಯೋಜನೆ, ಚಿತ್ರದುರ್ಗ | 08194–235958 |
| 3 | ಶಿಶು ಅಭಿವೃದ್ಧಿಯೋಜನೆ, ಚಳ್ಳಕೆರೆ | 08195–250291 |
| 4 | ಶಿಶು ಅಭಿವೃದ್ಧಿಯೋಜನೆ, ಹಿರಿಯೂರು | 08193–263512 |
| 5 | ಶಿಶು ಅಭಿವೃದ್ಧಿಯೋಜನೆ, ಹೊಳಲ್ಕೆರೆ | 08191–275250 |
| 6 | ಶಿಶು ಅಭಿವೃದ್ಧಿಯೋಜನೆ, ಹೊಸದುರ್ಗ | 08199–230212 |
| 7 | ಶಿಶು ಅಭಿವೃದ್ಧಿಯೋಜನೆ, ಮೊಳಕಾಲ್ಮೂರು | 08198–229535 |

ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಚಿತ್ರದುರ್ಗ

# ಕಾರ್ಯಕರ್ತೆ ಹುದ್ದೆ ಖಾಲಿ ಇರುವಅಂಗನವಾಡಿ ಕೇಂದ್ರಗಳ ವಿವರ

| Sl.no | Anganwadi Centre name | Grama Panchayath / Ward no. | Reserved for (SC/ST/Others) | ICDS Project |
|---|---|---|---|---|
| 1 | SIRIGERE-D | SIRIGERE | SC | BHARAMASAGARA |
| 2 | YAMMANAGHATTA | KOGUNDE | OTHERS | BHARAMASAGARA |
| 3 | T N KOTE-A | T N KOTE | OTHERS | CHALLAKERE |
| 4 | GOSIKERE SHARADA COLONY | T N KOTE | OTHERS | CHALLAKERE |
| 5 | CHIKKABADIHALLY | OBALAPURA | OTHERS | CHALLAKERE |
| 6 | LAKSHMIPURA | NAGARAMGERE | OTHERS | CHALLAKERE |
| 7 | GIRIYAMMANAHALLY-A | TALUKU | ST | CHALLAKERE |
| 8 | INJAIYANAHATTY-A | NAGARASABE WARD NO-25 | SC | CHALLAKERE |
| 9 | DASANNANA MAALIGE | AIMANGALA | OTHERS | HIRIYUR |
| 10 | HOLALKERE-C | PATTANA PANCHAYATHI HOLALKERE WARD NO-2 & 7 | OTHERS | HOLALKERE |
| 11 | THEKALAVATTI | THEKALAVATTI | OTHERS | HOLALKERE |
| 12 | HIREKANDAWADI-B | B-DURGA | S.C. | HOLALKERE |
| 13 | UGANEKATTE VADDARAHATTI | N.G.HALLI | S.C. | HOLALKERE |
| 14 | MATHIGATTA | H.D.PURA | S.C. | HOLALKERE |
| 15 | KAREHALLI-1 | KAREHALLI | OTHERS | HOSADURGA |
| 16 | DEVARAHATTI | JANKAL | OTHERS | HOSADURGA |
| 17 | DODDAKARPURADAKATTE | KANCHIPURA | OTHERS | HOSADURGA |
| 18 | D.MALLAPURA | DODDAGATTA | ST | HOSADURGA |

ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಚಿತ್ರದುರ್ಗ

## ಸಹಾಯಕಿ ಹುದ್ದೆ ಖಾಲಿ ಇರುವಅಂಗನವಾಡಿ ಕೇಂದ್ರಗಳ ವಿವರ

| Sl.no | Anganwadi Centre name | Grama Panchayath / Ward no. | Reserved for (SC/ST/Others) | ICDS Project |
|---|---|---|---|---|
| 1 | RIMMAGATTA | MADANAYAKANAHALLI | OTHERS | BHARAMASAGARA |
| 2 | CHIPPINAKERE-A | CHIKKAGONDANAHALLI | OTHERS | BHARAMASAGARA |
| 3 | SANNAHATTI | BELAGATTA | S.T. | BHARAMASAGARA |
| 4 | PELORAHATTI-A | BELAGATTA | S.T. | BHARAMASAGARA |
| 5 | BOMMAKKANAHALLI-A | KUNABEVU | OTHERS | BHARAMASAGARA |
| 6 | PALAKIHALLI-A | ALAGAVADI | S.T. | BHARAMASAGARA |
| 7 | CHIKKAPETE BASAVANAGUDI | WARD NO - 06 | OTHERS | CHITRADURGA |
| 8 | NEHARU NAGAR - C | WARD NO - 13 | OTHERS | CHITRADURGA |
| 9 | KAVADIGARAHATTY-B | WARD NO - 17 | S.C | CHITRADURGA |
| 10 | HALAGAPPANAHATTI | SONDEKOLA | OTHERS | CHITRADURGA |
| 11 | MEDEHALLY -B | MEDEHALLY | S.C | CHITRADURGA |
| 12 | KELAGALAHATTY | DYAMAVVANAHALLY | OTHERS | CHITRADURGA |
| 13 | M.K.HATTY -C | M.K.HATTY | OTHERS | CHITRADURGA |
| 14 | CHELUGUDDA-E | WARD NO -10, 11 | OTHERS | CHITRADURGA |
| 15 | RAMJOGIHALLY-A | RAMJOGIHALLY | SC | CHALLAKERE |
| 16 | HOSAMUCHAGUNTE | RAMJOGIHALLY | OTHERS | CHALLAKERE |
| 17 | PURLAHALLY-A | CHENNAMMANAGATHIHALLY | OTHERS | CHALLAKERE |
| 18 | CHATTEKAMBA | CHENNAMMANAGATHIHALLY | OTHERS | CHALLAKERE |
| 19 | MANAMAINAHATTY-B | N MAHADEVAPURA | SC | CHALLAKERE |
| 20 | DODDAULLARTHI-D | DODDAULLARTHI | ST | CHALLAKERE |
| 21 | DODDAGHATTA | KUNIKERE | OTHERS | HIRIYUR |
| 22 | SHIDLAYYANAHATTI | KUNIKERE | OTHERS | HIRIYUR |
| 23 | BALENAHALLI | GANNAYAKANAHALLI | SC | HIRIYUR |

| Sl.no | Anganwadi Centre name | Grama Panchayath / Ward no. | Reserved for (SC/ST/Others) | ICDS Proje |
|---|---|---|---|---|
| 24 | HANDIGANADU | YALLADAKERE | OTHERS | HIRIYUR |
| 25 | MALAGONDANAHALLI | GOWDANAHALLI | OTHERS | HIRIYUR |
| 26 | GOWDANAHALLI-1 | GOWDANAHALLI | ST | HIRIYUR |
| 27 | GOGUDDU | SURAGONDANAHALLI | OTHERS | HIRIYUR |
| 28 | KARIOBANAHALLI | GANNAYAKANAHALLI | OTHERS | HIRIYUR |
| 29 | PWD-2 | NAGARA SABHE HIRIYUR, WARD NO- 8 | OTHERS | HIRIYUR |
| 30 | VEDAVATHI NAGARA-2 | NAGARA SABHE HIRIYUR, WARD NO- 2 &3 | SC | HIRIYUR |
| 31 | SANTHEPETE-2 | NAGARA SABHE HIRIYUR, WARD NO- 15 | OTHERS | HIRIYUR |
| 32 | M D KOTE-1 | M D KOTE | ST | HIRIYUR |
| 33 | KUDLAHALLI-1 | ESWARAGERE | OTHERS | HIRIYUR |
| 34 | THIRUMALA NAGARA | ADIVALA | OTHERS | HIRIYUR |
| 35 | V V PURA MUSLIM COLONY | V V PURA | OTHERS | HIRIYUR |
| 36 | HOSA YALANADU 2 | HOSAYALANADU | SC | HIRIYUR |
| 37 | JAIPURA | AREHALLI | OTHERS | HOLALKERE |
| 38 | UDOGERE | MUTHUGADURU | OTHERS | HOLALKERE |
| 39 | GANJIGATTE | ANDANURU | S.T | HOLALKERE |
| 40 | VISHWANATHANAHALLI | MUTHUGADURU | S.T | HOLALKERE |
| 41 | HOLALKERE-B | PATTANA PANCHAYATHI WARD NO-4 & 6 | OTHERS | HOLALKERE |
| 42 | AVINAHATTI | VISHWANATHANAHALLI | OTHERS | HOLALKERE |
| 43 | MADDERU-A | MADDERU | OTHERS | HOLALKERE |
| 44 | BORENAHALLI | H.D.PURA | S.C | HOLALKERE |
| 45 | GUNDASAMUDRA | BIDARAKERE | OTHERS | HOLALKERE |
| 46 | THALIKATTE-B | THALIKATTE | OTHERS | HOLALKERE |

| Sl.no | Anganwadi Centre name | Grama Panchayath / Ward no. | Reserved for (SC/ST/Others) | ICDS Project |
|---|---|---|---|---|
| 47 | HIREKANDAWADI-B | B-DURGA | S.C | HOLALKERE |
| 48 | KALAGATTA VADDARAHATTI | MUTHUGADURU | S.C | HOLALKERE |
| 49 | INAHALLI | CHIKKAEMMIGANURU | S.C | HOLALKERE |
| 50 | MEKENAHATTI | AADANURU | S.C | HOLALKERE |
| 51 | KODAGAVALLI-B | CHIKKAEMMIGANURU | S.C | HOLALKERE |
| 52 | CHIKKANAKATTE | CHIKKAEMMIGANURU | S.T | HOLALKERE |
| 53 | CHIKKANDAWADI-C | GUNJIGANURU | S.C | HOLALKERE |
| 54 | S.H.HALLI GOLLARAHATTI | GUNJIGANURU | OTHERS | HOLALKERE |
| 55 | GOOLIHOSAHALLI-A | UPPARIGENAHALLI | S.C | HOLALKERE |
| 56 | KASAVANAHALLI | H.D.PURA | S.C | HOLALKERE |
| 57 | GUNDERI-B | GUNDERI | S.C | HOLALKERE |
| 58 | ANJANAPURA | DUMMI | OTHERS | HOLALKERE |
| 59 | MALLADIHALLI-C | MALLADIHALLI | OTHERS | HOLALKERE |
| 60 | MUDDAPURA LAMBANIHATTI | BIDARAKERE | S.C | HOLALKERE |
| 61 | N.G.HALLI-A | N.G.HALLI | OTHERS | HOLALKERE |
| 62 | SOMENAHALLI | KURUBARAHALLI | OTHERS | HOSADURGA |
| 63 | MALIGEHATTI | ATTIMAGGE | OTHERS | HOSADURGA |
| 64 | POOJARAHATTI | LAKKIHALLI | ST | HOSADURGA |
| 65 | CHINNAPURA | MADHURE | SC | HOSADURGA |
| 66 | KAGGALAKATTE | KANCHIPURA | OTHERS | HOSADURGA |
| 67 | CHIKKAMMANAHALLI | MALLAPANAHALLI | OTHERS | HOSADURGA |
| 68 | BRAHMA VIDYANAGARA | MADHURE | OTHERS | HOSADURGA |
| 69 | KODIHALLI | DEVAPURA | OTHERS | HOSADURGA |
| 70 | SANEHALLI-1 | SANEHALLI | OTHERS | HOSADURGA |
| 71 | KANCHIPURA-1 | KANCHIPURA | OTHERS | HOSADURGA |
| 72 | KITTADAL | KANCHIPURA | OTHERS | HOSADURGA |

| Sl.no | Anganwadi Centre name | Grama Panchayath / Ward no. | Reserved for (SC/ST/Others) | ICDS Project |
|---|---|---|---|---|
| 73 | C.B. KERE-1 | C.B. KERE | OTHERS | HOSADURGA |
| 74 | ANIVALA-1 | ANIVALA | OTHERS | HOSADURGA |
| 75 | MATHURU | KABBALA | OTHERS | HOSADURGA |
| 76 | KALKERE-1 | BALLALA SAMUDRA | OTHERS | HOSADURGA |
| 77 | S.B.HATTI | BELAGURU | SC | HOSADURGA |
| 78 | KADAVIGERE | HEGGERE | ST | HOSADURGA |
| 79 | K.P.HALLI | MATHODU | OTHERS | HOSADURGA |
| 80 | MARKANDEYA KENDRA | MOLAKALMURU TOWN PANCHAYATH WARD NO.04 | OTHERS | MOLAKALUMRU |
| 81 | GUDDADA HALLI | HIREKERAHALLI (GRAMA PANCHAYATH) | SC | MOLAKALUMRU |
| 82 | UDEVU B | KONASAGARA (GRAMA PANCHAYATH) | OTHERS | MOLAKALUMRU |
| 83 | VADERAHALLI | RAMPURA (GRAMA PANCHAYATH) | SC | MOLAKALMURU |
| 84 | MELINAKANIVE B | SANTE GUDDA (GRAMA PANCHAYATH) | ST | MOLAKALMURU |
| 85 | KONAPURA A | TAMMENAHALLI (GRAMA PANCHAYATH) | ST | MOLAKALMURU |
| 86 | MURUDI | TAMMENAHALLI (GRAMA PANCHAYATH) | OTHERS | MOLAKALMURU |
| 87 | HALEDADAGURU | J. B. HALLI (GRAMA PANCHAYATH) | ST | MOLAKALMURU |

ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಚಿತ್ರದುರ್ಗ

**ಸರ್ಕಾರಿಆದೇಶ ಸಂ:ಮಮಇ 303 ಐಸಿಡಿ 2017, ದಿನಾಂಕ:23.09.2017ಕ್ಕೆಅನುಬಂಧ**
**ಅಂಗನವಾಡಿಕಾರ್ಯಕರ್ತೆ / ಸಹಾಯಕಿಯರನ್ನುಆಯ್ಕೆ ಮಾಡಲು ಮಾರ್ಗಸೂಚಿಗಳು ಮತ್ತುಅರ್ಹತೆಯ ಮಾನದಂಡಗಳು .**

## I. ಅಂಗನವಾಡಿಕಾರ್ಯಕರ್ತೆ / ಸಹಾಯಕಿಯರಆಯ್ಕೆಗೆಅರ್ಹತೆ ಮಾನದಂಡಗಳು :-

### 1) ವಯೋಮಿತಿ :

ಅಂಗನವಾಡಿಕಾರ್ಯಕರ್ತೆ / ಸಹಾಯಕಿಯರ ಹುದ್ದೆಗೆಅರ್ಜಿ ಸಲ್ಲಿಸಲು 18-35 ವರ್ಷ ವಯೋಮಿತಿಯೊಳಗಿರಬೇಕು.ಅಲ್ಲದೇಸರ್ಕಾರದ **ಸೇರ್ಪಡೆಆದೇಶ ಸಂಖ್ಯೆ : ಮಮಇ 27 ಐಸಿಡಿ 2017, ದಿನಾಂಕ:01-12-2017 ರ ಪ್ರಕಾರಅಂಗನವಾಡಿಕಾರ್ಯಕರ್ತೆಯರ ನೇಮಕಾತಿಗಳಲ್ಲಿ ವಿಕಲಚೇತನರಿಗೆ 10ವರ್ಷ ವಯೋಮಿತಿ ಸಡಲಿಕೆಯನ್ನು ನೀಡಿದೆ** (ವಿಕಲಚೇತನರಿಗೆ ಮಾತ್ರ 18-45 ವರ್ಷ ವಯೋಮಿತಿಯೊಳಗಿರಬೇಕು)

### 2) ಸ್ಥಳೀಯತೆ :

ಅಂಗನವಾಡಿಕಾರ್ಯಕರ್ತೆ / ಸಹಾಯಕಿಯರಆಯ್ಕೆಗೆ ಸ್ಥಳೀಯರಾಗಿರಬೇಕು.ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕದಒಂದು (1) ವರ್ಷದೊಳಗೆ ಸಂಬಂಧಪಟ್ಟ ತಹಶೀಲ್ದಾರರಿಂದ / ಉಪ ತಹಶೀಲ್ದಾರರಿಂದ ಪಡೆದ ವಾಸಸ್ಥಳ ದೃಢೀಕರಣ ಪತ್ರವನ್ನುಕಡ್ಡಾಯವಾಗಿಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

### 3) ವಿದ್ಯಾರ್ಹತೆ :

1) **ಅಂಗನವಾಡಿಕಾರ್ಯಕರ್ತೆ:**ಎಸ್.ಎಸ್.ಎಲ್.ಸಿ. ತೇರ್ಗಡೆ, ಹೆಚ್ಚಿನ ವಿದ್ಯಾರ್ಹತೆಯನ್ನುಆಯ್ಕೆಗೆ ಪರಿಗಣಿಸುವಂತಿಲ್ಲ.

ಅ) ಕರ್ನಾಟಕರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಮುಕ್ತ ಶಾಲೆ / ಮುಕ್ತ ವಿದ್ಯಾಲಯಗಳಲ್ಲಿ ಎಸ್.ಎಸ್.ಎಲ್.ಸಿ. ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಪ್ರಥಮ / ದ್ವಿತೀಯ ಭಾಷೆಯಾಗಿಕನ್ನಡ ಹಾಗೂ ಸಾಮಾನ್ಯಗಣಿತ ಮತ್ತು ಸಮಾಜಶಾಸ್ತ್ರ / ಸಮಾಜ ವಿಜ್ಞಾನ ವಿಷಯಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿದ್ದು, ಪ್ರಮಾಣ ಪತ್ರ / ಅಂಕಪಟ್ಟಿಯುಗರಿಷ್ಠ 625, ಕನಿಷ್ಠ 219 ಅಂಕಗಳನ್ನು ಹೊಂದಿದಲ್ಲಿ, ಅಂತಹ ಅಭ್ಯರ್ಥಿಗಳಣ್ನು ಪರಿಗಣಿಸತಕ್ಕದ್ದು.

ಆ) ಬೇರೆ ರಾಜ್ಯಗಳ ಶಾಲೆಗಳಲ್ಲಿ ವ್ಯಾಸಂಗ ಮಾಡಿದ್ದು, ಕನ್ನಡವನ್ನು ಪ್ರಥಮ / ದ್ವಿತೀಯ ಭಾಷೆಯಾಗಿಅಭ್ಯಾಸ ಮಾಡಿದ್ದರೂ, ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಆ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಹಾಗೂ ಕನಿಷ್ಠ ಅಂಕಗಳು ಹಾಗೂ ಕರ್ನಾಟಕರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಹಾಗೂ ಕನಿಷ್ಠ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ, ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸತಕ್ಕದ್ದು.

ಇ) ಅಂಗನವಾಡಿಕಾರ್ಯಕರ್ತೆಯರು ಶಾಲಾ ಪೂರ್ವ ಶಿಕ್ಷಣವನ್ನು ಹಾಗೂ ದಾಖಲೆಗಳನ್ನು ಕನ್ನಡದಲ್ಲಿ ನಿರ್ವಹಿಸಬೇಕಾಗಿರುವುದರಿಂದ ಅಭ್ಯರ್ಥಿಗಳು ಯಾವುದೇ ಭಾಷ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೂ ಹಾಗೂ ಯಾವುದೇರಾಜ್ಯದಲ್ಲಿ ವ್ಯಾಸಂಗ ಮಾಡಿದ್ದರೂ ಸಹ ಅವರುಕನ್ನಡ ಭಾಷೆಯನ್ನು ಪ್ರಥಮ / ದ್ವಿತೀಯ ಭಾಷೆಯಾಗಿ ವ್ಯಾಸಂಗ ಮಾಡಿರಬೇಕು ಹಾಗೂ ಮಾತೃಭಾಷೆಕನ್ನಡವಲ್ಲದೇಇರುವ ಅಭ್ಯರ್ಥಿಗಳಿಗೆ ಆಯ್ಕೆ ಸಮಿತಿಯುಆಯ್ಕೆ ಸಮಯದಲ್ಲಿ ಸಂದರ್ಶನ ಏರ್ಪಡಿಸಿ ಹಾಗೂ ಅವಶ್ಯವಿದ್ದಲ್ಲಿಕನ್ನಡ ಭಾಷೆಯಜ್ಞಾನದಕುರಿತಂತೆ ಓದಿಸಿ, ಬರೆಸಿ ಅವರಕನ್ನಡ ಭಾಷಾಜ್ಞಾನವನ್ನು ಪರೀಕ್ಷಿಸಿ ಅವರನ್ನುಆಯ್ಕೆಯನ್ನು ಮಾಡುವ ಬಗ್ಗೆ ಸಮಿತಿಯವರು ನಿರ್ಧರಿಸುವುದು.

### ii) ಅಂಗನವಾಡಿ ಸಹಾಯಕಿ :

ಅ) ಕನಿಷ್ಠ 4ನೇ ತರಗತಿತೇರ್ಗಡೆ, ಗರಿಷ್ಠ 9ನೇ ತರಗತಿತೇರ್ಗಡೆ, ಇದರಲ್ಲಿ ಹೆಚ್ಚಿನ ವಿದ್ಯಾರ್ಹತೆಯುಳ್ಳವರನ್ನು ಆಯ್ಕೆ ಮಾಡಬೇಕು. 9ನೇ ತರಗತಿಗಿಂತ ಹೆಚ್ಚಿನ ವಿದ್ಯಾರ್ಹತೆಯನ್ನುಆಯ್ಕೆಗೆ ಪರಿಗಣಿಸುವಂತಿಲ್ಲ.

ಆ) ಒಂದೇ ವಿದ್ಯಾರ್ಹತೆಯುಳ್ಳ ಒಂದಕ್ಕಿಂತ ಹೆಚ್ಚು ಅರ್ಜಿ ಬಂದಿದ್ದಲ್ಲಿ ಹೆಚ್ಚು ಅಂಕಗಳಿಸಿದವರನ್ನು ಆಯ್ಕೆ ಮಾಡಬೇಕು.

## II ಅಂಗನವಾಡಿ ಕೇಂದ್ರಗಳ ವ್ಯಾಪ್ತಿಗುರ್ತಿಸುವ ಬಗ್ಗೆ :-

1) ಅಂಗನವಾಡಿಕಾರ್ಯಕರ್ತೆ / ಸಹಾಯಕಿಯರುಗೌರವಸೇವೆಗೆ ಸೇರಿದೆ, ಅಂಗನವಾಡಿಕೇಂದ್ರ ಪ್ರಾರಂಭಿಸುವಗ್ರಾಮಾಂತರ ಪ್ರದೇಶದಕಂದಾಯಗ್ರಾಮ / ನಗರ ಪ್ರದೇಶದಕಂದಾಯ ವಾರ್ಡ್‌ನಒಟ್ಟುಜನಸಂಖ್ಯೆಯು ಶೇಕಡ 40ಕ್ಕಿಂತ ಹೆಚ್ಚು ಪರಿಶಿಷ್ಠಜಾತಿ ಹಾಗೂ ಶೇಕಡ 40ಕ್ಕಿಂತ ಹೆಚ್ಚು ಪರಿಶಿಷ್ಠ ವರ್ಗದವರನ್ನು ಒಳಗೊಂಡಿದ್ದ ಸಂದರ್ಭದಲ್ಲಿ ಈ ವರ್ಗಗಳ ಪೈಕಿ ಅತೀ ಹೆಚ್ಚು ಜನಸಂಖ್ಯೆಯಿರುವ ವರ್ಗದವರಿಗೆಕಾರ್ಯಕರ್ತೆ / ಸಹಾಯಕಿಯ ಹುದ್ದೆಯನ್ನು ನಿಗದಿಪಡಿಸಿ ಪ್ರಕಟಣೆ ಹೊರಡಿಸಬೇಕು. ಪ್ರಕಟಣೆಯಲ್ಲಿ ಸ್ಪಷ್ಟವಾಗಿ ಯಾವ ವರ್ಗದವರಿಗೆ ಹುದ್ದೆಯನ್ನು ನಿಗದಿಪಡಿಸಲಾಗಿದೆಯೆಂದು ಸೂಚಿಸಬೇಕು.ನಿಗದಿಪಡಿಸಿದ ವರ್ಗದವರನ್ನೇಆಯ್ಕೆ ಮಾಡುವುದು.

2) ಒಂದುಗ್ರಾಮದಲ್ಲಿ ಈಗಾಗಲೇ ಅಂಗನವಾಡಿಕೇಂದ್ರವಿದ್ದು ಪುನಃ ಬೇಡಿಕೆಗೆಅನುಸಾರವಾಗಿ ಹೊಸ ಕೇಂದ್ರವನ್ನು ಪ್ರಾರಂಭಿಸುತ್ತಿದ್ದಲ್ಲಿ, ಹೊಸ ಕೇಂದ್ರ ಪ್ರಾರಂಭಿಸುವ ಪ್ರದೇಶದ (ವ್ಯಾಪ್ತಿಯ) ಜನಸಂಖ್ಯೆಯಲ್ಲಿ ಶೇಕಡ 40ಕ್ಕಿಂತ ಹೆಚ್ಚು ಜನಸಂಖ್ಯೆ ಪರಿಶಿಷ್ಠ ಜಾತಿಅಥವಾ ಪರಿಶಿಷ್ಠ ವರ್ಗದವರಿದ್ದಲ್ಲಿ ಆ ಅಂಗನವಾಡಿಕೇಂದ್ರಕ್ಕೆ ಸದರಿ ವರ್ಗದವರಿಗೆಕಾರ್ಯಕರ್ತೆ / ಸಹಾಯಕಿ ಹುದ್ದೆಯನ್ನು ನಿಗದಿಪಡಿಸಿ ಪ್ರಕಟಣೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಿ ಆ ವರ್ಗದವರನ್ನೇಆಯ್ಕೆ ಮಾಡುವುದು.

3) ಶೇಕಡ 25ಕ್ಕಿಂತ ಹೆಚ್ಚು ಅಲ್ಪಸಂಖ್ಯಾತ (ಮುಸ್ಲಿಮರು, ಕ್ರಿಶ್ಚಿಯನರು, ಜೈನರು, ಬೌದ್ಧರು, ಪಾರ್ಸಿಗಳು ಮತ್ತು ಸಿಕ್ಕರು) ಜನಸಂಖ್ಯೆಯಿರುವ ಪ್ರದೇಶದಅಂಗನವಾಡಿ ಕೇಂದ್ರಗಳಲ್ಲಿ ಕನ್ನಡ ಭಾಷೆಯೊಂದಿಗೆಆಯಾಅಲ್ಪಸಂಖ್ಯಾತ ಸಮುದಾಯದ ಭಾಷೆ ಬಲ್ಲವರನ್ನುಕಾರ್ಯಕರ್ತೆ / ಸಹಾಯಕಿಯ ಹುದ್ದೆಗೆಆಯ್ಕೆ ಮಾಡುವುದು.

4) ಪರಿಶಿಷ್ಠಜಾತಿ / ಪರಿಶಿಷ್ಠ ಪಂಗಡದವರಿಗೆಕಾರ್ಯಕರ್ತೆ / ಸಹಾಯಕಿ ಹುದ್ದೆ ನಿಗದಿಪಡಿಸಿದ ಅಂಗನವಾಡಿ ಕೇಂದ್ರಗಳಲ್ಲಿ ನಿಗದಿತ ವರ್ಗದವರಿಂದ ಅರ್ಜಿಗಳು ಬಾರದಿದ್ದಲ್ಲಿ ಮರು ಪ್ರಕಟಣೆಯನ್ನು 7 ದಿವಸದೊಳಗೆ ಹೊರಡಿಸಿ ಪುನಃ ಅರ್ಜಿಗಳನ್ನು ಆಹ್ವಾನಿಸಬೇಕು.ಆಗಲೂ ನಿಗದಿತ ವರ್ಗದವರಿಂದ ಅರ್ಜಿಗಳು ಬಾರದೇ ಹೋದಲ್ಲಿ ಪುನಃ 10 ದಿನದೊಳಗೆ ಪ್ರಕಟಣೆ ಹೊರಡಿಸಿ ಸಾಮಾನ್ಯ ವರ್ಗದವರಿಂದಅರ್ಜಿ ಆಹ್ವಾನಿಸಿ ಆಯ್ಕೆ ಮಾಡುವುದು.

5) ಅಂಗನವಾಡಿಕಾರ್ಯಕರ್ತೆ / ಸಹಾಯಕಿಯರಆಯ್ಕೆಗೆ ಸಂಬಂಧಿಸಿದ ಅಂಗನವಾಡಿಕೇಂದ್ರದಗ್ರಾಮಾಂತರ ಪ್ರದೇಶದಕಂದಾಯಗ್ರಾಮ ಹಾಗೂ ನಗರ ಪ್ರದೇಶದಕಂದಾಯ ವಾರ್ಡ್‌ಗಳನ್ನು ಪರಿಗಣಿಸಬೇಕು, ಚುನಾವಣಾ ವಾಡ್‌ಗಳನ್ನು ಪರಿಗಣಿಸುವಂತಿಲ್ಲ.

6) ಒಂದುಗ್ರಾಮದಲ್ಲಿಒಂದಕ್ಕಿಂತ ಹೆಚ್ಚು ಅಂಗನವಾಡಿ ಕೇಂದ್ರಗಳಿದ್ದಾಗ, ಆ ಕೇಂದ್ರ ವ್ಯಾಪ್ತಿಗೆ ಸಂಬಂಧಪಟ್ಟಗ್ರಾಮ / ವಾರ್ಡ್‌ರವರಿಂದ ಮಾತ್ರ ಅರ್ಜಿಗಳನ್ನು ಆಹ್ವಾನಿಸಬೇಕು.ಒಂದು ಪಕ್ಷ ಆ ಗ್ರಾಮ / ವಾರ್ಡ್‌ರವರಿಂದ ಮಾತ್ರ ಅರ್ಜಿಗಳು ಸ್ವೀಕೃತವಾಗದೇ ಹೋದಲ್ಲಿ, 7 ದಿವಸದೊಳಗೆ ಮರು ಪ್ರಕಟಣೆ ಹೊರಡಿಸಬೇಕು.ಎರಡನೇ ಬಾರಿಯೂ ಸ್ಥಳೀಯರಿಂದ ಅರ್ಜಿ ಸ್ವೀಕೃತವಾಗದಿದ್ದಲ್ಲಿ ಪುನಃ 10 ದಿವಸದೊಳಗೆ ಪ್ರಕಟಣೆ ಹೊರಡಿಸಿ ಅತ್ಯಂತಸಮೀಪದಗ್ರಾಮ / ವಾರ್ಡ್‌ಗಳಿಂದ ಅರ್ಹ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸುವುದು.

7) ಅಂಗನವಾಡಿಕಾರ್ಯಕರ್ತೆ / ಸಹಾಯಕಿಯರಆಯ್ಕೆಗಾಗಿಎರಡನೇ ಬಾರಿಗೆಯಾವುದೇ ಮರು ಪ್ರಕಟಣೆ ಹೊರಡಿಸುವ ಮುನ್ನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಸ್ವತಃಗ್ರಾಮ / ವಾರ್ಡ್‌ಗೆ ಭೇಟಿ ನೀಡಿ ಆ ವರ್ಗದ / ಗ್ರಾಮದ / ವಾರ್ಡ್‌ನಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲವೆಂಬ ಬಗ್ಗೆ ಸ್ಥಳ ಪರಿಶೀಲನಾ ವರದಿ ಪಡೆದುಕೊಂಡಿರಬೇಕು.

8) ಅಂಗನವಾಡಿಕಾರ್ಯಕರ್ತೆ / ಸಹಾಯಕಿಯರಆಯ್ಕೆಗಾಗಿ ಪ್ರಕಟಣೆಯನ್ನು ಸ್ಪಷ್ಠ / ನಿಖರವಾಗಿ ಹೊರಡಿಸತಕ್ಕದ್ದು. ಹುದ್ದೆ ಖಾಲಿಯಿರುವ ಸ್ಥಳ, ಆ ಹುದ್ದೆಜನಸಂಖ್ಯೆಆಧಾರದಲ್ಲಿಯಾವ ವರ್ಗಕ್ಕೆ ನಿಗದಿಪಡಿಸಲಾಗಿದೆ ಎಂಬ ಬಗ್ಗೆ ತಿಳಿಸಿ ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸತಕ್ಕದ್ದು.ಪ್ರಕಟಣೆಯನ್ನುಗ್ರಾಮದ ಕೃಷಿ ಸಂಪರ್ಕಕೇಂದ್ರ, ಪ್ರಾಥಮಿಕಆರೋಗ್ಯಕೇಂದ್ರ, ಶಾಲೆ, ಗ್ರಾಮ ಲೆಕ್ಕಿಗರಕಛೇರಿ, ಅಂಗನವಾಡಿಕಟ್ಟಡ, ಗ್ರಾಮ ಪಂಚಾಯತ್‌ಕಛೇರಿಕಟ್ಟಡ ಹಾಗೂ ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ಸೂಚನಾ ಫಲಕದ ಮೇಲೆ ಪ್ರದರ್ಶಿಸತಕ್ಕದ್ದು.ಪ್ರಕಟಣೆ ಹೊರಡಿಸಿದ ದಿನಾಂಕದಿಂದ 25 ದಿನದೊಳಗೆ ಅರ್ಜಿ ಸಲ್ಲಿಸುವಕಾಲಾವಧಿಯನ್ನು ನಿಗದಿಪಡಿಸಿರತಕ್ಕದ್ದು ಹಾಗೂ ಪ್ರಕಟಣೆಯ ಪ್ರತಿಯನ್ನುಆಯ್ಕೆ ಸಮಿತಿಯಎಲ್ಲಾ ಸದಸ್ಯರಿಗೂ ಕಳುಹಿಸತಕ್ಕದ್ದು.

9) ಅಂಗನವಾಡಿಕಾರ್ಯಕರ್ತೆ / ಸಹಾಯಕಿಹುದ್ದೆಗೆಅರ್ಜಿ ಸಲ್ಲಿಸಿದವರಲ್ಲಿ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸಮಾನ ಅಂಕ ಗಳಿಸಿದ್ದಲ್ಲಿ ವಯೋಹಿರಿತನವನ್ನು ಪರಿಗಣಿಸಬೇಕು.

10) ಅಂಗನವಾಡಿಕಾರ್ಯಕರ್ತೆ ಹುದ್ದೆಖಾಲಿಯಾದ/ ಹೊಸ ಕೇಂದ್ರಕ್ಕೆಅರ್ಹ ಸಹಾಯಕಿಯರಿಂದಕಾರ್ಯಕರ್ತೆ ಹುದ್ದೆಕೋರಿಅರ್ಜಿ ಸ್ವೀಕೃತವಾಗಿದ್ದಲ್ಲಿ, ಅವರನ್ನೇಆಯ್ಕೆ ಮಾಡತಕ್ಕದ್ದು, ಅಂತಹಯಾವುದೇ ಅರ್ಜಿಗಳು ಸ್ವೀಕೃತವಾಗಿಲ್ಲದಿದ್ದಲ್ಲಿ, ಸ್ಥಾನಪಲ್ಲಟಕೋರಿ ಬಂದಿರುವ ಅರ್ಜಿಗಳನ್ನು ಪರಿಗಣಿಸುವುದು. ಸ್ಥಾನಪಲ್ಲಟ ಕೋರಿ ಯಾವುದೇ ಅರ್ಜಿಗಳು ಸ್ವೀಕೃತವಾಗಿಲ್ಲದಿದ್ದಲ್ಲಿ ಹೊಸದಾಗಿ ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿ ಗರಿಷ್ಠ 2 ತಿಂಗಳೊಳಗೆ ಮುಗಿಸತಕ್ಕದ್ದು.

11) ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ಆಯ್ಕೆಯಾಗದ ಸಂಭವವಿದ್ದಲ್ಲಿ, ಆಯ್ಕೆ ಪಟ್ಟಿ ಪ್ರಕಟಿಸುವ ಮುನ್ನ ಚುನಾಯಿತ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ರಾಜೀನಾಮೆ ಅಂಗೀಕೃತ ಪತ್ರ ನೀಡಬೇಕಾಗಿರುವುದು ಕಡ್ಡಾಯ, ಅಂದರೆ ಯಾವುದಾದರೂ ಒಂದು ಸ್ಥಾನದಲ್ಲಿ ಮಾತ್ರ ಕೆಲಸ ನಿರ್ವಹಿಸಲು ಅವಕಾಶವಿದೆ.

**ಆಯ್ಕೆ ಆದ್ಯತೆ:**

ಈ ಕೆಳಕಂಡಂತೆ ಆದ್ಯತೆ ಪಡೆಯಲು ಇಚ್ಛಿಸುವ ಅರ್ಜಿದಾರರು ನಿಗದಿತ ವಿದ್ಯಾರ್ಹತೆ ಹೊಂದಿದ್ದು, ವಯೋಮಿತಿಯೊಳಗೆ ಮತ್ತು ಸ್ಥಳೀಯರಾಗಿರಬೇಕಾಗಿರುವುದು ಕಡ್ಡಾಯ.

**1) ಆಸಿಡ್ ದಾಳಿಗೊಳಗಾದವರ ಆಯ್ಕೆ:-**

ಆಸಿಡ್ ದಾಳಿಗೆ ತುತ್ತಾದ ಮಹಿಳೆಯರು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ, ಇತರೆ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೆ ಮೊದಲ ಆದ್ಯತೆ ಮೆರೆಗೆ ನೇರವಾಗಿ ಅವರನ್ನೇ ಆಯ್ಕೆ ಮಾಡತಕ್ಕದ್ದು.

**2) ಇಲಾಖೆಯ ಸಂಸ್ಥೆಗಳ ನಿವಾಸಿಗಳ ಆಯ್ಕೆ:-**

ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗಳಿಗೆ ಬಾಲನ್ಯಾಯ ಕಾಯ್ದೆಯಡಿ ಇಲಾಖೆಯ ಸಂಸ್ಥೆಗಳಲ್ಲಿ ಹಾಗೂ ರಾಜ್ಯ ಮಹಿಳಾ ನಿಲಯಗಳಲ್ಲಿ ಆಶ್ರಯ ಪಡೆದ ಹಾಲಿ / ಮಾಜಿ ನಿವಾಸಿಗಳು ಅರ್ಜಿ ಸಲ್ಲಿಸಿದಾಗ ಮಾರ್ಗಸೂಚಿಯ ಕ್ರಮ ಸಂಖ್ಯೆ III (1) ನೆಯವರನು ಹೊತರು ಪಡಿಸಿ ಇತರೆ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸಿ ಎರಡನೆ ಆದ್ಯತೆ ಮೇರೆಗೆ ನೇರವಾಗಿ ಅವರನ್ನೇ ಆಯ್ಕೆ ಮಾಡತಕ್ಕದ್ದು.

**3) ವಿಧವೆಯರ ಆಯ್ಕೆ:-**

ಅ) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯ ಹುದ್ದೆಗಳಿಗೆ ವಿಧವೆಯರು ಅರ್ಜಿ ಸಲ್ಲಿಸಿದಾಗ ಮಾರ್ಗಸೂಚಿಯ III (1) ಮತ್ತು (2) ನೆಯವರನ್ನು ಹೊರತು ಪಡಿಸಿ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸಿದೆ ಮೂರನೆ ಆದ್ಯತೆ ಮೇರೆಗೆ ನೇರವಾಗಿ ಅವರನ್ನೇ ಆಯ್ಕೆ ಮಾಡತಕ್ಕದ್ದು ಅರ್ಜಿ ಸಲ್ಲಿಸಿದ ನಂತರ ವಿಧವೆಯಾದಲ್ಲಿ ಪರಿಗಣಿಸುವಂತಿಲ್ಲ.

ಆ) ವಿಧವೆಯರಲ್ಲಿ, ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಗೆ (ವಿಧವೆಗೆ) ಪ್ರಥಮ ಆದ್ಯತೆ ನೀಡತಕ್ಕದ್ದು.

ಇ) ವಿಧವೆಯರು ತಾವು ಪ್ರಸ್ತುತ ಎಲ್ಲಿ ವಾಸವಿರುವುದಾಗಿ, ವಾಸಸ್ಥಳ ದೃಢೀಕರಣವನ್ನು ಸಲ್ಲಿಸಿರುತ್ತಾರೆ, ಆ ಸ್ಥಳವನ್ನೆ ಅವರ ವಾಸಸ್ಥಳವೆಂದು ಪರಿಗಣಿಸತಕ್ಕದ್ದು.

ಈ) ಒಂದೇ ಹುದ್ದೆಗೆ ಇಬ್ಬರು ವಿಧವೆಯರು ಅರ್ಜಿ ಸಲ್ಲಿಸಿದ್ದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಬಹುದಾಗಿದೆ.

**4) ಅಂಗವಿಕಲರ ಆಯ್ಕೆ:-**

ಇ) ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳಿಗೆ ಅಂಗವಿಕಲರು ಅರ್ಜಿ ಸಲ್ಲಿಸಿದಾಗ, ಮಾರ್ಗಸೂಚಿಯ III (1) (2) ಮತ್ತು(3) ನೆಯವರನ್ನು ಹೊರತು ಪಡಿಸಿ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸಿದೆ ನಾಲ್ಕನೇ ಆದ್ಯತೆ ಮೇರೆಗೆ ನೇರವಾಗಿ ಅವರನ್ನೆ ಆಯ್ಕೆ ಮಾಡತಕ್ಕದ್ದು.

ಈ) ಅಂಗವಿಕಲರು ಪ್ರಸ್ತುತ ತಾವು ಎಲ್ಲಿ ವಾಸವಾಗಿರುವುದಾಗಿ ವಾಸಸ್ಥಳ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೋ ಆ ಸ್ಥಳವನ್ನೆ ಅವರ ವಾಸಸ್ಥಳವೆಂದು ಪರಿಗಣಿಸತಕ್ಕದ್ದು.

ಉ) ಅಂಗನವಾಡಿ ಕಾರ್ಯಕರ್ತೆ ಹುದ್ದೆಯಲ್ಲಿ 3-6 ವರ್ಷ ಮಕ್ಕಳಿಗೆ ಆಟ ಮತ್ತು ಅಭಿನಯ ಗೀತೆಗಳ ಮೂಲಕ ಶಾಲಾ ಪೂರ್ವ ಶಿಕ್ಷಣವನ್ನು ನೀಡಲಾಗುತ್ತಿದ್ದು ಚಟುವಟಿಕೆ ವೇಳೆಯಲ್ಲಿ ಮಕ್ಕಳನ್ನು ಹಿಡಿದೆತ್ತಿ ನಿಲ್ಲಿಸಲು ಹಾಗೂ ಅಭಿನಯ ಮಾಡಿ ತೋರಿಸಬೇಕಾಗಿರುತ್ತದೆ.ವೃತ್ತ ಸಭೆ, ತಾಯಂದಿರ ಸಭೆ ಮತ್ತು ಮನೆ

ಭೇಟಿ ನಿರ್ವಹಿಸಬೇಕಾಗಿರುತ್ತದೆ.ಆದ ಕಾರಣ ಕಿವುಡರು ಮತ್ತು ಮೂಕರು, ಕುರುಡರು, ಬುದ್ಧಿ ಮಾಂಧ್ಯರು, ಮಾನಸಿಕ ಅಸ್ವಸ್ಥರು ಕಾರ್ಯಕರ್ತೆ ಹುದ್ದೆಗೆ ಅರ್ಹರಲ್ಲ.

ಊ) ಅಂಗನವಾಡಿ ಸಹಾಯಕಿಯ ಹುದ್ದೆಯಲ್ಲಿ ಅಂಗನವಾಡಿ ಫಲಾನುಭವಿಗಳಿಗೆ ಪೂರಕ ಪೌಷ್ಠಿಕ ಆಹಾರವನ್ನು ಬೇಯಿಸಿ / ಸಿದ್ಧಪಡಿಸಿ ಉಣಬಡಿಸುವುದು, ಕೇಂದ್ರವನ್ನು ಸ್ವಚ್ಛಗೊಳಿಸುವುದು, ಮಕ್ಕಳನ್ನು ಅವರ ಮನೆಗಳಿಂದ ಕೇಂದ್ರಕ್ಕೆ ಕರೆತರುವುದು ಹಾಗೂ ಕಾರ್ಯಕರ್ತೆಯು ವೃತ್ತಸಭೆ, ತಾಯಂದಿರ ಸಭೆ ಮತ್ತು ಮನೆ ಭೇಟಿಗೆ ಹೋದಾಗ ಅಂಗನವಾಡಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

ಋ) ಇತರೆ ದೈಹಿಕ ಅಂಗವೈಕಲ್ಯತೆ ಶೇ.60 ಮೀರದಂತೆ ಇರುವವರು ಅರ್ಜಿ ಸಲ್ಲಿಸಬಹುದಾಗಿದೆ.ಅಂಗೀಕೃತ ಪ್ರಾಧಿಕಾರ (ಜಿಲ್ಲಾ ವೈದ್ಯಕೀಯ ಮಂಡಳಿ) ದಿಂದ ಪಡೆದ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಹಾಜರುಪಡಿಸಬೇಕು.

ಎ) ಅಂಗವಿಕಲ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಅಂಗವಿಕಲತೆಯ ಪ್ರಮಾಣದ ಬಗ್ಗೆ ಸಂಶಯ ಉಂಟಾದಲ್ಲಿ ಆ ಅಭ್ಯರ್ಥಿಯನ್ನು ಆಯ್ಕೆ ಸಮಿತಿಯ ಮುಂದೆ ಖುದ್ದು ಹಾಜರಾಗಲು ಸೂಚಿಸಿ ಸದರಿ ಹುದ್ದೆ ನಿರ್ವಹಿಸಲು ಸಮರ್ಥರಿರುವ ಬಗ್ಗೆ ಸಮಿತಿಯೇ ಪರಿಶೀಲಿಸಿ ನಿರ್ಧರಿಸತಕ್ಕದ್ದು.

ಏ) ಒಂದೇ ಹುದ್ದೆಗೆ ಇಬ್ಬರು ಅಂಗವಿಕಲರು ಅರ್ಜಿ ಸಲ್ಲಿಸಿದ್ದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಬಹುದಾಗಿದೆ.

**V) ಬೋನಸ್ ಅಂಕಗಳು :- (ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಿಗೆ)**

* ಮಾಜಿ ದೇವದಾಸಿಯ ಮಗಳು
* ಯೋಜನಾ ನಿರಾಶ್ರಿತರು
* ವಿಚ್ಛೇದಿತ ಮಹಿಳೆಯರು
* ಪರಿತ್ಯಕ್ತೆಯರು

ಹೆಚ್ಚಿನ 5 ಬೋನಸ್ ಅಂಕಗಳಿಗೆ ಅರ್ಹರಾಗಿರುತ್ತಾರೆ. ಪ್ರತಿ ವಿನಾಯಿತಿಗೂ 5 ಬೋನಸ್ ಅಂಕ ನೀಡುವುದು, ಆದರೆ ಯಾವುದೇ ಕಾರಣಕ್ಕೂ ಅವರು ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಕ್ಕೆ ಶೇಕಡಾ 5(5%) ಅಂಕ ನೀಡುವಂತಿಲ್ಲ. ಉದಾ: ಒಬ್ಬ ಅಭ್ಯರ್ಥಿಯು ನಿರಾಶ್ರಿತರು, ಪರಿತ್ಯಕ್ತೆ, ಮಾಜಿ ದೇವದಾಸಿ, ವಿಚ್ಛೇದಿತರು ಆಗಿದ್ದಲ್ಲಿ ಪ್ರತಿ ವಿನಾಯಿತಿಗೂ 5 ಬೋನಸ್ ಅಂಕಗಳನ್ನು ನೀಡುವುದು. ಅಂದರೆ ಸದರಿಯವರು ನಿಗದಿತ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳಿಗೆ ಮಾಜಿ ದೇವದಾಸಿಯರ ಅವಿವಾಹಿತ ಹೆಣ್ಣು ಮಕ್ಕಳು +5, ಯೋಜನಾ ನಿರಾಶ್ರಿತರು +5, ವಿಚ್ಛೇದಿತ ಮಹಿಳೆಯರು +5, ಪರಿತ್ಯಕ್ತೆಯರು +5, ಒಟ್ಟು 20 ಬೋನಸ್ ಅಂಕಗಳನ್ನು ನೀಡುವುದು.ಬೋನಸ್ ಅಂಕ ಪಡೆಯಲು ಸಂಬಂಧಿತ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕಾಗಿರುವುದು ಕಡ್ಡಾಯ.

**VI) ಆನ್-ಲೈನ್ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು :-**

* ಅರ್ಜಿ ನಿಗದಿತ ನಮೂನೆಯಲ್ಲಿ (ಆನ್-ಲೈನ್)
* ಜನನ ಪ್ರಮಾಣ ಪತ್ರ / ಜನ್ಮ ದಿನಾಂಕ ಇರುವ ಎಸ್.ಎಸ್.ಎಲ್.ಸಿ ಅಂಕ ಪಟ್ಟಿ.
* ನಿಗದಿತ ವಿದ್ಯಾರ್ಹತೆಯ ಅಂಕಪಟ್ಟಿ.
* **ತಹಶೀಲ್ದಾರರು / ಉಪ ತಹಶೀಲ್ದಾರರಿಂದ ಪಡೆದ ಒಂದು (1) ವರ್ಷದೊಳಗಿನ ವಾಸಸ್ಥಳ ದೃಢೀಕರಣ ಪತ್ರ.**
* ಅಭ್ಯರ್ಥಿಯ ಜಾತಿ ಪ್ರಮಾಣ ಪತ್ರ.
* ಪತಿಯ ಮರಣ ಪ್ರಮಾಣ ಪತ್ರ (ವಿಧವಾ ವೇತನದ ದೃಢೀಕರಣವನ್ನು ಪರಿಗಣಿಸುವಂತಿಲ್ಲ)
* ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ ಎಂದು ಉಪವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ
* ಅಂಗವಿಕಲತೆ ಪ್ರಮಾಣ ಪತ್ರ (ಅಂಗವಿಕಲ ವೇತನದ ದೃಢೀಕರಣವನ್ನು ಪರಿಗಣಿಸುವಂತಿಲ್ಲ)
* ವಿಚ್ಛೇಧನ ಪ್ರಮಾಣ ಪತ್ರ. (ನ್ಯಾಯಾಲಯದಿಂದ ಪಡೆದಿರಬೇಕು)
* ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಸಲ್ಪಟ್ಟ ಮಾಜಿ ದೇವದಾಸಿಯರ ಸಮೀಕ್ಷೆಯ ಪಟ್ಟಿಯಲ್ಲಿರುವ ಮಾಜಿ ದೇವದಾಸಿಯರ ಮಕ್ಕಳು ಎಂಬುದರ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪ್ರಮಾಣ ಪತ್ರ.
* ಪರಿತ್ಯಕ್ತೆ ಬಗ್ಗೆ ಗ್ರಾಮ ಪಂಚಾಯ್ತಿಯಿಂದ ಪಡೆದ ಪ್ರಮಾಣ ಪತ್ರ.
* ಇಲಾಖೆಯ ಸುಧಾರಣ ಸಂಸ್ಥೆ / ರಾಜ್ಯ ಮಹಿಳಾ ನಿಲಯಗಳ ನಿವಾಸಿ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
* ಯೋಜನಾ ನಿರಾಶ್ರಿತರ ಬಗ್ಗೆ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ.

**VII) ಆಯ್ಕೆ ವಿಧಾನ :-**

1) ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ ನಂತರ 7 ಕೆಲಸದ ದಿನಗಳೊಳಗೆ ಸಮಿತಿ ಸಭೆ ಸೇರಬೇಕು.

2) ಆಯ್ಕೆ ಸಮಿತಿಯ ಎಲ್ಲಾ ಸದಸ್ಯರು ಹಾಜರಾಗಲು ಸಾಧ್ಯವಾಗದಂತಹ ಅನಿವಾರ್ಯ ಕಾರಣಗಳಿದ್ದಲ್ಲಿ ಕನಿಷ್ಠ 2/3 ರಷ್ಟು ಸದಸ್ಯರು ಕಡ್ಡಾಯವಾಗಿ ಹಾಜರಿರಬೇಕು.

3) ಆನ್-ಲೈನ್ ನಲ್ಲಿ ಹಾಕಿದ್ದ ಎಲ್ಲಾ ಅರ್ಜಿಗಳನ್ನು ಅಂದೇ ಪರಿಶೀಲಿಸುವುದು.

4) ಆನ್-ಲೈನ್ ಅರ್ಜಿಯೊಂದಿಗೆ ಯಾವುದೇ ಅಗತ್ಯ ದಾಖಲೆಯನ್ನು ಸಲ್ಲಿಸದೇ ಇದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದು.

5) ಸ್ವೀಕೃತವಾದ ಅರ್ಜಿಗಳನ್ನು ವಿದ್ಯಾರ್ಹತೆಯಲ್ಲಿ ಪಡೆದ ಅಂಕ ಮತ್ತು ಬೋನಸ್ ಅಂಕಗಳನ್ನು ಒಳಗೊಂಡಂತೆ ಪಡೆದ ಒಟ್ಟು ಅಂಕಗಳಿಗನುಸಾರವಾಗಿ ಕ್ರೋಢೀಕೃತ ಪಟ್ಟಿಯನ್ನು ಆನ್-ಲೈನ್‌ನಲ್ಲಿ ಸಿದ್ಧಪಡಿಸಿ, ಅರ್ಹತೆ ಮತ್ತು ಮೆರಿಟ್‌ಗನುಸಾರವಾಗಿ ಪರಿಶೀಲಿಸಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಂದೇ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವುದು.

6) ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ಒಂದು ವಾರ (7 ದಿನಗಳು) ಕಾಲಾವಕಾಶ ನೀಡುವುದು ಹಾಗೂ ಕಾಲಾವಕಾಶ ಮುಗಿದ ಮುಂದಿನ ಕೆಲಸದ ದಿನವೇ ಸಮಿತಿ ಸಭೆ ಕರೆದು ಆಕ್ಷೇಪಣೆಗಳು ಸ್ವೀಕೃತವಾದಲ್ಲಿ ಅವುಗಳನ್ನು ಕ್ರೂಢೀಕರಿಸಿ, ಚರ್ಚಿಸಿ ಕಾರ್ಯಕರ್ತೆ / ಸಹಾಯಕಿಯರ ಅಂತಿಮ ಆಯ್ಕೆ ಪಟ್ಟಿಯನ್ನು ಅಂದೇ ಸೂಚನಾ ಫಲಕದಲ್ಲಿ ಪ್ರಕಟಿಸುವುದು.

7) ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಸಮಸ್ಯೆ ಕಂಡುಬಂದಲ್ಲಿ ನೇಮಕಾತಿ ಪ್ರಾಧಿಕಾರವೇ ಚರ್ಚಿಸಿ ನಿಯಮಾನುಸಾರ ಕ್ರಮವಹಿಸುವುದು.ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

8) ಆಯ್ಕೆ ನಡವಳಿ ಪುಸ್ತಕದಲ್ಲಿ ಆಯ್ಕೆ ಸಮಿತಿಗೆ ಹಾಜರಾದ ಎಲ್ಲಾ ಸದಸ್ಯರ ಹಾಜರಾತಿ ಪಡೆಯುವುದು. ಆಯ್ಕೆ ಪ್ರಕ್ರಿಯೆ ಮುಗಿದ ನಂತರ ನಡವಳಿಗಳನ್ನು ಸವಿವರ(Speaking Order)ವಾಗಿ, ಕೇಂದ್ರವಾರು ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳನ್ನು ಯಾವ ಮಾನದಂಡಗಳನ್ವಯ ಆಯ್ಕೆ ಮಾಡಲಾಗಿದೆ ಎಂಬ ಷರಾದೊಂದಿಗೆ ನಡವಳಿಯಲ್ಲಿ ದಾಖಲಿಸಿ ಯಾವುದೇ ತಿದ್ದುಪಡಿಗಳಿದ್ದಲ್ಲಿ ಸಕಾರಣದೊಂದಿಗೆ ದೃಢೀಕರಿಸಿ ಹಾಜರಿರುವ ಆಯ್ಕೆ ಸಮಿತಿಯ ಎಲ್ಲಾ ಸದಸ್ಯರ ಸಹಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

9) ಸಂಬಂಧಪಟ್ಟ ಜಿಲ್ಲೆಯ ಉಪನಿರ್ದೇಶಕರು ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಾಗಿ ಕಾರ್ಯನಿರ್ವಹಿಸಲು ನೇಮಕಾತಿ ಆದೇಶಗಳನ್ನು ಹೊರಡಿಸಬೇಕು.

10) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯ ಹುದ್ದೆಯು ಸಂಪೂರ್ಣವಾಗಿ ಗೌರವ ಸೇವೆಯಾಗಿದ್ದು, ಖಾಯಂ ಹುದ್ದೆಯಲ್ಲವೆಂದು ನೇಮಕಾತಿ ಆದೇಶದಲ್ಲಿ ತಿಳಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳು ವರದಿ ಮಾಡಿಕೊಳ್ಳುವ ಸಮಯದಲ್ಲಿ ಮೂಲ ದಾಖಲಾತಿಗಳು, ವೈದ್ಯಕೀಯ ಪ್ರಮಾಣ ಪತ್ರ (ಫಿಟ್‌ನೆಸ್ ಸರ್ಟಿಫಿಕೆಟ್)ಗಳನ್ನು ಹಾಜರುಪಡಿಸಿ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾದಿಕಾರಿಗಳು ಪರಿಶೀಲಿಸಿ ವರದಿ ಮಾಡಿಸಿಕೊಳ್ಳತಕ್ಕದ್ದು.

**VII) ಅಂಗನವಾಡಿ ಸಕಾಯಕಿಯರನ್ನು ಕಾರ್ಯಕರ್ತೆಯರನ್ನಾಗಿ ಆಯ್ಕೆ ಮಾಡುವ ಬಗ್ಗೆ :-**

1) ಅಂಗನವಾಡಿ ಕಾರ್ಯಕರ್ತೆ ಹುದ್ದೆ ಖಾಲಿಯಿರುವ / ಹೊಸ ಕೇಂದ್ರ ಪ್ರಾರಂಭಿಸುತ್ತಿರುವ ಗ್ರಾಮದಲ್ಲಿ ವಾಸಿಸುತ್ತಿರುವ ಸಹಾಯಕಿಯರಿದ್ದು, ಅವರು ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿದ್ದು, ಕನಿಷ್ಠ 3 ವರ್ಷ ಸೇವೆ ಸಲ್ಲಿಸಿದ್ದು, 45 ವರ್ಷ ವಯೋಮಿತಿಯೊಳಗಿದ್ದು, ಆ ಅಂಗನವಾಡಿ ಕೇಂದ್ರದಿಂದ 3 ಕಿ.ಮೀ ವ್ಯಾಪ್ತಿಯೊಳಗೆ ವಾಸಿಸುತ್ತಿದ್ದು, ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಆ ಅಂಗನವಾಡಿ ಕೇಂದ್ರಕ್ಕೆ ಕಾರ್ಯಕರ್ತೆ ಹುದ್ದೆಗೆ ಬೇರೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಪ್ರಮೇಯವಿರುವುದಿಲ್ಲ. ಸದರಿ ಸಹಾಯಕಿಯನ್ನೇ ಕಾರ್ಯಕರ್ತೆ ಹುದ್ದೆಗೆ ಆಯ್ಕೆ ಮಾಡತಕ್ಕದ್ದು. ಈ ಬಗ್ಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಆಯ್ಕೆ ಸಮಿತಿಯ ಅಧ್ಯಕ್ಷರಿಗೆ ಪ್ರಸ್ತಾವನೆಯನ್ನು ಸಲ್ಲಿಸಿ ಅನುಮೋದನೆ ಪಡೆದು ಆದೇಶ ಹೊರಡಿಸತಕ್ಕದ್ದು.

2) ಒಂದೇ ಗ್ರಾಮದಲ್ಲಿ ಇಬ್ಬರು ಎಸ್.ಎಸ್.ಎಲ್.ಸಿ ಪಾಸಾದ ಅರ್ಹ ಸಹಾಯಕಿಯರಿದ್ದು ಅರ್ಜಿ ಸಲ್ಲಿಸಿದಲ್ಲಿ ಅವರ ಸೇವಾ ಹಿರಿತನವನ್ನು ಪರಿಗಣಿಸುವುದು.ಸೇವಾ ಹಿರಿತನವೂ ಒಂದೇ ಆಗಿದ್ದಲ್ಲಿ ವಯೋ ಹಿರಿಯರನ್ನು ಪರಿಗಣಿಸಬೇಕು.

**VIII) ಅನುಕಂಪದ ಆಧಾರದಲ್ಲಿ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗೆ ಗುರುತಿಸುವ ಬಗ್ಗೆ :-**

1) ಸೇವೆಯಲ್ಲಿರುವಾಗಲೇ ಮರಣಹೊಂದುವ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಅವಿವಾಹಿತ ಮಗಳನ್ನು ಅವರ ತಾಯಿಯು ನಿರ್ವಹಿಸುತ್ತಿದ್ದ ಹುದ್ದೆಗೆ ಅನುಕಂಪದ ಆಧಾರದಲ್ಲಿ ಇತರೆ ಕುಟುಂಬದ ಸದಸ್ಯರಿಂದ ನಿರಾಕ್ಷೇಪಣಾ ಪತ್ರವನ್ನು ನಿಗದಿತ ಮೊತ್ತದ ಛಾಪಾಕಾಗದದ ಮೇಲೆ ಪಡೆದು ನೇಮಕ ಮಾಡತಕ್ಕದ್ದು.

2) ಅಭ್ಯರ್ಥಿಯ ನಿಗದಿರ ವಿದ್ಯಾರ್ಹತೆ, ವಯೋಮಿತಿ ಮತ್ತು ಸ್ಥಳೀಯರಾಗಿರುವುದು ಕಡ್ಡಾಯ.

**IX) ಶಿಸ್ತು ಪ್ರಾಧಿಕಾರ :-**

ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಕಾರ್ಯನಿರ್ವಹಣೆಯಲ್ಲಿ ಯಾವುದೇ ನ್ಯೂನ್ಯತೆಗಳ ಬಗ್ಗೆ ದೂರುಗಳು ಸ್ವೀಕೃತಗೊಂಡಲ್ಲಿ ಅವುಗಳನ್ನು ಪರಿಶೀಲಿಸಿ ಇವರನ್ನು ಸೇವೆಯಿಂದ ವಜಾಗೊಳಿಸುವ ಅಧಿಕಾರವು ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ / ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಇರುತ್ತದೆ.

ಉಪ ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಚಿತ್ರದುರ್ಗ